ಹಮ್ ಸಬ್ ಕೆ ಹೈಂ (ಹಿಂದಿ) **ರಾಗ: ಹಂಸಧ್ವನಿ**

ಹಮ್ ಸಬ್ ಕೆ ಹೈಂ ಚಾಚಾ ನೆಹರು॥ಪ॥ ಸಾರೇ ಜಗ್‌ಸೆ ನ್ಯಾರೇ ನೆಹರು। ಕಭೀ ನ ಹಾರೆ ಹಿಮ್ಮತ್ ನೆಹರು। ಭಾರತ್ ಕೆ ಹೈ ದೀಪಕ್ ನೆಹರು। ಕಿತನೇ ಸುಂದರ್ ಚಾಚಾ ನೆಹರು॥1॥ ಪ್ರೇಮ್ ಪಾಠ್ ಸಿಖಲಾತೇ ನೆಹರು। ಸಬ್ ಕೋ ಗಲೇ ಲಗಾತೆ ನೆಹರು। ಶಾಂತಿ ದೂತ್ ಥೇ ಚಾಚಾ ನೆಹರು। ನೇಕ್ ರಾಹ್ ಬತಲಾತೇ ನೆಹರು॥2॥

ಅಂಬೇಡ್ಕರ್

ಅಮರ ವೀರ ಅಂಬೇಡ್ಕರ್ (ಲಾವಣಿ)

ಅಮರ ವೀರ ಅಂಬೇಡ್ಕರ ಸಮರಗೈದ ಅಂದು। ಸ್ವಾತಂತ್ರ್ಯ ಸ್ವಾಭಿಮಾನ ಸಮಾನತೆ ಗೆಂದು॥ಪ॥ ದಲಿತರ ಪ್ರಗತಿಗೆ ಹಗಲಿರುಳು ದುಡಿದು। ಹಸನಾಗಿಸಿದೆ ಬಾಳು ಕೊನೆಗೂ ನೀ ಮಡಿದು। ಛಲದಿ ಎದುರೀಜಿದೆ ಸಮಸ್ಯೆಗಳ ಸಾಗರ। ಬೆಚ್ಚಿದರು ಗಾಂಧೀ ನೆಹರು ಸರದಾರ॥1॥ ಜಾತಿವಾದಿ ಕುತಂತ್ರರು ವಿಷಬೀಜ ಬಿತ್ತಿ। ಆಧುನಿಕ ಮನುಪಟ್ಟ ನಿನಗೆ ಕಟ್ಟಿ। ದೇವರ ಅಸ್ತಿತ್ವವನೇ ಪ್ರಶ್ನಿಸಿದ ನಿನ್ನ। ದೇವರನ್ನಾಗಿಸಿ ಪೂಜಿಪರೋ ಈ ಜನ॥2॥ಸಂವಿಧಾನ ಶಿಲ್ಪಿಯೇ ಮಹಾಕ್ರಾಂತಿಕಾರ। ಕತ್ತಲೆ ಲೋಕದ ಜನಕೋಟಿ ನೇತಾರ। ನೊಂದವರ ಮನಮಿಡಿದ ಹೋರಾಟಗಾರ। ಚರಿತ್ರೆಯ ಪುಟಪುಟದಿ ನಿನ್ನನಾಮ ಅಮರ॥3॥ ಶಿಕ್ಷಣ ಸಂಘಟನೆ ಹೋರಾಟ ಬೇಕೆಂದೆ। ನಿನ್ನ ನಂತರ ಉಳಿದದ್ದು ಘೋಷಣೆಯೊಂದೆ। ನಿನ್ನಲ್ಲಿರುವ ಗಟ್ಟಿತನ ಒಬ್ಬರಲಿಯೂ ಬರಲಿಲ್ಲ। ನಿನ್ನ ಕನಸು ನನಸಾಗಿಸೋ ಆಶೆಯೇ ನಮಗೆಲ್ಲ॥4॥

ಸ್ವತಂತ್ರ ದೇಶ ಭಾರತ ಕಂಡ **ರಾಗ: ಕಾಪಿ**

ಸ್ವತಂತ್ರ ದೇಶ ಭಾರತ ಕಂಡ ಪುಣ್ಯಪುರುಷ। ಈ ಶತಮಾನದ ಕೀರ್ತಿ ಕಳಸ ಬಾಬಾ ಸಾಹೇಬ ಅಂಬೇಡ್ಕರ್॥1॥ ದೀನದಲಿತರಿಗೆ ಮನಮಿಡಿದ ದೇಶದ ಹಿತವ ಚಿಂತಿಸಿದ। ಸಂವಿಧಾನವನೆ ಇವ ಬರೆದ ಬಾಬಾ ಸಾಹೇಬ ಅಂಬೇಡ್ಕರ್॥2॥ ಎಲ್ಲ ಧರ್ಮಗಳ ಪ್ರೀತಿಸಿದ ಸ್ವಂತ ಸುಖಗಳನೆ ಇವ ಮರೆತ। ಗ್ರಂಥಸರಸ್ವತಿ ಇವರಾಸ್ತಿ ಬಾಬಾಸಾಹೇಬ ಅಂಬೇಡ್ಕರ್॥3॥

ಸ್ವಾಗತ ಗೀತೆ

ಆನಂದದಿ ತಲೆ ಬಾಗುತ

ಆನಂದದಿ ತಲೆ ಬಾಗುತ ಬುಧಜನವೆಲ್ಲಕೆ। ಸ್ವಾಗತ ವೀಯುವೆವು॥ಪ॥ ಮುಸುಕಿದೆ ಕತ್ತಲು। ಜ್ಯೋತಿಯ ನೇಸರ। ಎಸೆವನು। ಪೂರ್ವದ ಶಿಖರದಲಿ। ಹೊಸ ತೇಜದೊಳಗೆ ಬೆಳಗುವ ತಾಯಿಯ ಜಸದಲೆ ಆತ್ಮವ ಕರಗಿಸುತ। ಶಿಸ್ತನು ಕಲಿಸುತ ಐಕ್ಯತೆ ಬೆಳೆಸುವೆ ನಮ್ಮ ಸೇವಾದಳ॥1॥

ಕರುನಾಡಿಗೆ ಸ್ವಾಗತ ಕೋರುವೆವು **ರಾಗ: ಮಾಂಡ್**

ಕರುನಾಡಿಗೆ ಸ್ವಾಗತ ಕೋರುವೆವು ಸಂತಸ। ಕನ್ನಡದ ಮಕ್ಕಳು ಎಲ್ಲರೊಂದುಗೂಡುತ। ನಮ್ಮ ನಾಡು ಕನ್ನಡ ನಮ್ಮ ನುಡಿಯು ಕನ್ನಡ॥ಪ॥ ಸಾಧು ಸಂತಜ್ಞಾನಿ ಶಿಲ್ಪಿ ಭಕ್ತ ಕವಿಗಳೆಲ್ಲರ। ಹಡೆದ ತಾಯಿ ಕನ್ನಡ ಪಡೆದ ಭೂಮಿ ಕನ್ನಡ॥1॥ ನಾವು ಹುಟ್ಟಿ ಬೆಳೆದು ಬಾಳಿದಂಥ ನಾಡು ಕನ್ನಡ। ವೀರ ಧೀರ ಶೂರರ ದಾನಧರ್ಮ ಶೀಲರ॥2॥ ಕನ್ನಡಾಂಬೆ ಪಾದದಲ್ಲಿ ನಮ್ಮ ಶಿರವನಿಡುವೆವು। ಕನ್ನಡಾಂಬೆ ಸೇವೆಗಾಗಿ ಟೊಂಕಕಟ್ಟಿ ದುಡಿವೆವು। ನಾವು ಹುಟ್ಟಿ ಬೆಳೆದ ನಾಡಿಗಾಗಿ ಪ್ರಾಣ ಕೊಡುವೆವು॥3॥

ಗೆಳೆಯ ಕನ್ನಡಿಗರೇ ಸ್ವಾಗತವು ನಿಮಗೆ **ರಾಗ: ಮೋಹನ**

ಗೆಳೆಯ ಕನ್ನಡಿಗರೇ ಸ್ವಾಗತವು ನಿಮಗೆ। ಬೆಳೆವ ಸಿರಿಗನ್ನಡದ ಬಳ್ಳಿ ಪಡೆದರಳುಗಳೆ ಸ್ವಾಗತವು ನಿಮಗೆ॥ಪ॥ ಒಬ್ಬ ಕನ್ನಡದೇವಿಯುದರದಿಂದೊಗೆದು। ಒಬ್ಬ ಕನ್ನಡಜನನಿ ಎದೆಹಾಲ ಮೊಗೆದು। ಒಬ್ಬ ಮಾತೆಯ ಮಡಿಲು ತೊಡೆಗಳಲಿ ಕುಣಿದು। ಒಬ್ಬ ತಾಯುಲಿಗಳನೆ ತೊದಲಿ ನುಡಿದು। ಬೆಳೆದ ಕನ್ನಡಿಗರೇ ಬಂಧು ಕನ್ನಡಿಗರೇ। ಇನಿಯ ಕನ್ನಡಿಗರೇ ಸ್ವಾಗತವು ನಿಮಗೆ॥1॥ ನಾವೆಲ್ಲರೊಡಗೂಡಿ ಒಡನಾಡಿ ಕಲೆತು। ಕನ್ನಡದ ಸೇವೆಯಲಿ ನಮ್ಮ ಮೈಮರೆತು। ಕುಂದು ಕೊರತೆಗಳೊಂದಕಿಂಬಿಲ್ಲದಂತೆ। ನಮ್ಮ ಸಖ್ಯದ ಮೊಗ್ಗು ಬಿರಿದರಳುವಂತೆ। ದೇವಿ ಕರುಣಿಸಲಿ ವರವ ಎಮಗೆ। ಕನ್ನಡದ ದೇವಿ ಕೈ ಕೊಳಲಿ ಫಲವಾ॥2॥ ಕನ್ನಡಿಗ ಸೋದರರೆ ಸ್ವಾಗತವು ನಿಮಗೆ। ಕನ್ನಡದ ಸಿರಿಬಳ್ಳಿ ಹೊಮ್ಮಿಸಿರುವರಳುಗಳೆ। ಇಂದು ಸ್ವಾಗತವು ನಿಮಗೆ॥ ನಿಮಗಾಗಿ ಕಾದಿರುವ ಕರುನಾಡಿಗೆ॥

ಧರ್ಮ ಭೂಮಿ ಭಾರತ **ರಾಗ: ದೇಶ್**

ಧರ್ಮ ಭೂಮಿ ಭಾರತ ಸಾರುತಿಹುದು ಜನಹಿತ। ವಿಶ್ವಶಾಂತಿಗಾಗಿ ದುಡಿವ ಸಕಲರಿಗೇ ಸ್ವಾಗತ ಸುಸ್ವಾಗತ॥ಪ॥ ಉಜ್ವಲಕಲೆ ಸಂಸತಿಗಳ ಜ್ಞಾನಭೂಮಿ ಭಾರತ। ಧೈರ್ಯ ಶೌರ್ಯ ಸಾಹಸಗಳ ವೀರ ಭೂಮಿ ಭಾರತ॥1॥ ಸತ್ಯ ಶಾಂತಿಗಾಗಿ ದುಡಿವ ಕರ್ಮಭೂಮಿ ಭಾರತ। ಸರ್ವಧರ್ಮ ಸಮನ್ವಯದ ತ್ಯಾಗ ಭೂಮಿ ಭಾರತ॥2॥ ನ್ಯಾಯ ನೀತಿ ಶಾಂತಿ ಪ್ರೀತಿತಾಣ ನಮ್ಮ ಭಾರತ। ರಾಗ ಯೋಗ ಭಾಗ್ಯಮೈತ್ರಿ ಮೋಕ್ಷಭೂಮಿ ಭಾರತ॥3॥

ನಮ್ಮದಾದ ಶಾಲೆಯು **ರಾಗ:ಮೋಹನ**

ನಮ್ಮದಾದ ಶಾಲೆಯು ನಿಮ್ಮದಾದ ಶಾಲೆಯು। ಸೊಗಸಾದ ಶಾಲೆಯು ನಮ್ಮದಲ್ಲವೇ॥ ಮಧುರಗೀತೆ ಹಾಡಿರಿ ಶಾಲೆಯಾ ಬಾಂಧವರೆ। ಶಾಲೆಯಾ ಸೊಬಗನ್ನು ಕೊಂಡಾಡಿರೈ॥ಪ॥ ಮುದ್ದು ಮಕ್ಕಳಿಗೇ ಇದು ಸಿಹಿ ಸಕ್ಕರೇ। ಮಮತೆಯಾ ಪೋಷಕರಿಗೆ ಕಲ್ಲುಸಕ್ಕರೆ। ಪೋಷಕರ ಕಂಡರೆ ಇದಕೆ ಅಕ್ಕರೆ। ಶಾಲೆಯಾ ಬಾಂದವರೆ ನೀವು ನಕ್ಕರೆ॥ ಆದರದ ಸ್ವಾಗತವ ನೀಡುವೆವು ನಾವು। ಶಾಲೆಯಾ ವಾರ್ಷಿಕೋತ್ಸವಕ್ಕೆ ಬಂದರೇ॥2॥ ಮಕ್ಕಳಾ ನಡುವಿನಾ ಮೋಹನಾಸ್ತ್ರವು। ಶಿಕ್ಷಕರ ಬದುಕಿನ ದಿವ್ಯ ಅಸ್ತ್ರವು। ತುಂಬಿಹುದು ಎಲ್ಲರ ಹೃದಯದಲ್ಲಿ। ಚಿಣ್ಣರಾ ರೂಪವು ಚಿಣ್ಣರಾ ಪ್ರತಿಭೆಯು ಕಂಗೊಳಿಸುತಿಹುದವರ ಕಂಗಳಲ್ಲಿ। ಆದರದ ಬಂದರೇ॥

ನಾವೆಲ್ಲ ಪುಷ್ಪಗಳು ಪರಿಮಳವ **ರಾಗ: ಹಂಸಧ್ವನಿ**

ನಾವೆಲ್ಲ ಪುಷ್ಪಗಳು ಪರಿಮಳವ ಬೀರುವೆವು। ಸ್ವಾಗತವಾ ಕೋರುವೆವು ಇಂದಿನಾ ದಿನಾ। ಇಂದಿನಾ ದಿನಾ॥ಪ॥ ನಾನು ಮಲ್ಲಿಗೆ ಬಹಳ ಚಿಕ್ಕದು। ನನ್ನಂಥ ಚಿಕ್ಕ ಹೂವು ಬೇರೆಲ್ಲೂ ಸಿಕ್ಕದು॥ 1॥ ನಾನು ಸಂಪಿಗೆ ಬಹಳ ಉದ್ದದು। ನನ್ನಂಥ ಉದ್ದ ಹೂವು ಬೇರೆಲ್ಲೂ ಸಿಕ್ಕದು॥2॥ ನಾನು ತಾವರೆ ಬಹಳ ಅಗಲದು।ನನ್ನಂಥ ಅಗಲ ಹೂ ಬೇರೆಲ್ಲೂ ಸಿಕ್ಕದು॥3॥ ನಾನು ಗುಲಾಬಿ ಬಹಳ ಕೆಂಪದು। ನನ್ನಂಥ ಕೆಂಪು ಹೂ ಬೇರೆಲ್ಲೂ ಸಿಕ್ಕದು॥4॥ ನಾನು ಸೇವಂತಿಗೆ ರೇಖು ಸಣ್ಣದು। ಬಹಳ ದಿನ ಬಾಡದಿರುವ ಗುಣವು ನನ್ನದು॥5॥ ನಾನು ಜಾಜಿ ಬಹಳ ಘಮ ಘಮ ನನ್ನಂಥಾ ಘಮಘಮ ಬೇರೆಲ್ಲೂ ಸಿಕ್ಕದು॥6॥ ನಾನು ಪಾರಿಜಾತ ಪೂಜೆಗೊಳ್ಳೆ ಹೂ। ಶ್ರೀಕೃಷ್ಣನು ಮೆಚ್ಚಿದ ಹಿರಿಮೆ ನನ್ನದು॥7॥

ಪ್ರಾರ್ಥನೆಯಿಂದಲಿ ಪ್ರೇಕ್ಷಕ ಜನರಲಿ **ರಾಗ: ಬಹುದಾರಿ**

ಪ್ರಾರ್ಥನೆಯಿಂದಲಿ ಪ್ರೇಕ್ಷಕ ಜನರಲಿ। ಇದು ಅರ್ಪಿತವು ಸ್ವಾಗತವು॥ಪ॥ ಸಭೆಯಲಿ ಸೇರಿದ ಸರ್ವರನು। ಸಭೆಯಾಧ್ಯಕ್ಷರ ಘನತೆಯನು। ಸ್ವಾಗತಿಸುವೆವು ಸುಮಗಳನೆಸೆವೆವು। ಕುಣಿವೆವು ನಲಿವೆವು ಹಾಡುವೆವು॥1॥ ಸಾಹಿತ್ಯದ ಸಂಗೀತದಲಿ। ನಾಟಕ ನರ್ತನ ಹಾದಿಯಲಿ। ತಪ್ಪನು ಕ್ಷಮಿಸಿರಿ ಇದೋ ನಮೋ। ಹರಕೆಯ ನೀಡಿರಿ ಇದೋ ನಮೋ॥2॥ ಅಲೆಗಳ ಕಲೆಗಳ ಸುರನಿಧಿಯೂ। ಕಣ್ಣು ಪಣ್ಣುಗಳ ಜಲಧಿಯಲಿ। ಆದೊಡೆ ಸಂಗಮ ಸಾಗರ ಸಂಗಮ। ಪುಣ್ಯ ವರೇಣ್ಯರೇ ಸರಿಯಮ್ಮ॥3॥

ಬನ್ನಿರಿ ನಮ್ಮಯ ಅತಿಥಿಗಳೇ **ರಾಗ: ಅಭೇರಿ**

ಬನ್ನಿರಿ ನಮ್ಮಯ ಅತಿಥಿಗಳೇ। ವಂದಿಸಿ ಸ್ವಾಗತ ಬಯಸುವೆವು। ಸುಸ್ವಾಗತವಾಗಲಿ ನಿಮಗೀಗಾ॥ಪ॥ ವಿದ್ಯಾಗಣಪತಿ ಕೃಪೆಯಿಂದ ನಾವು। ವಿವಿಧ ವಿನೋದವ ನಡೆಸುವೆವು। ವಿಘ್ನವ ಗೈಯದೆ ಉತ್ಸವ ನಡೆಯಲು। ವಿಘ್ನೇಶ್ವರನನು ಬೇಡುವೆವು॥1॥ ನಾವೆಲ್ಲರು ಸೇರಿ ಒಕ್ಕೊರಲಿಂದ। ಆ ದೇವರನು ಸ್ತುತಿಸೋಣ। ಶಂಕೆಯಿಲ್ಲದೆ ಆತನು ನಮ್ಮಯ ಶಾಲೆಯ ಉತ್ಸವಕೆ ಮಂಗಳವೀಯಲಿ ॥2॥

ಸ್ವಾಗತವ ನೀಡುವೆವು ಹರುಷದಿಂದಲೀ **ರಾಗ: ಶುಭಪಂತುವರಾಳಿ**

ಸ್ವಾಗತವ ನೀಡುವೆವು ಹರುಷದಿಂದಲೀ। ಇಂದಿನ ಸುಸಂಭ್ರಮದ ಪುಣ್ಯದಿನದಲಿ॥ಪ॥ ಶಾಲೆ ಬಾಲ ಬಾಲಕಿಯರು ಕೂಡುತ। ಹೂವ ಚೆಲುವ ಮಾಲೆಯನ್ನು ಹಿಡಿಯುತ। ಕಂಪು ಬೀರ್ವ ಹೂಗಳನ್ನು ಚೆಲ್ಲುತಾ। ಮನದಿ ಹರುಷವನ್ನು ನಾವು ತಾಳುತಾ। ಹರುಷ ತಂದಿದೆ ಮನಕೆ ಶುಭವ ನೀಡಿದೆ। ಒಮ್ಮನದೆ ಸ್ವಾಗತವ ಹೃದಯ ಬಯಸಿದೆ॥1॥ ನಿಷ್ಠೆಯಿಂದ ಶಾಲೆಸೇವೆ ಗೈಯುತಾ। ನಿಮ್ಮಗಳ ಪ್ರೀತಿಯನ್ನು ಗಳಿಸುತಾ। ಅನವರತವು ವಿದ್ಯೆಗಾಗಿ ದುಡಿಯುತಾ। ನಿಮ್ಮಯ ಉದಾರವನ್ನು ಗಳಿಸುತಾ। ನಿಮ್ಮ ಶಕ್ತಿ ಭಕ್ತಿಯನ್ನು ವೃದ್ಧಿ ಪಡಿಸಲಿ॥ ಧೀರ್ಘಕಾಲ ಬಾಳಿರೆಂದು ಬೇಡುತಿರುವೆವು॥2॥

ಸ್ವಾಗತವು ನಿಮಗೆ ಸುಸ್ವಾಗತವೂ **ರಾಗ: ಕಾನಡ**

ಸ್ವಾಗತವು ನಿಮಗೆ ಸುಸ್ವಾಗತವೂ ನಿಮಗೆ॥ಪ॥ ಕೆಚ್ಚೆದೆ ಕಲಿಗಳೆ, ಹೊನ್ನಾಡ ಮಣಿಗಳೆ। ಗಂಧದ ಗುಡಿಯವರೇ, ಸಿರಿಗನ್ನಡ ನೆಲದವರೇ। ಕನ್ನಡಾಂಬೆ ಋಣವಾ ತೀರಿಸಲು ಬನ್ನಿ। ಕರುನಾಡ ಕಣಕಣ ಕಸ್ತೂರಿಯಾಗಿ। ಕರೆಯೋಣ ಪರಿಮಳ ಕನ್ನಡವಾಗಿ। ಕುವೆಂಪು ಕವನ ಕಾನಡವಾಗಿ। ಸ್ವಾಗತ ಕೋರಿಹುದೂ ಸುಸ್ವಾಗತ ಕೋರಿಹುದೂ॥1॥ ತಾಯ ಹಾಲ ಋಣವಾ ತೀರಿಸಲು ಬನ್ನಿ। ಕಾವೇರಿ ಅಲೆಗಳ ಕಲರವ ಗಾನ। ಬೇಲೂರ ಬಾಲೆಯ ಬೆಡಗಿನ ನರ್ತನ। ಸಹ್ಯಾದ್ರಿ ಮಲೆಯ ಬೆಡಗಿನ ನರ್ತನ। ಸಹ್ಯಾದ್ರಿ ಮಲೆಯ ಸುಮಧುರ ತಾಣ। ಸ್ವಾಗತ ಕೋರಿಹುದೂ। ಸುಸ್ವಾಗತ ಕೋರಿಹುದೂ। ನಾಡು ನುಡಿಯ ಋಣವಾ ತೀರಿಸಲು ಬನ್ನಿ॥2॥

ಸ್ವಾಗತವು ಸುಸ್ವಾಗತವು ಇಂದಿನ **ರಾಗ: ಹಂಸಧ್ವನಿ**

ಸ್ವಾಗತವು ಸುಸ್ವಾಗತವು ಇಂದಿನ ಕೂಟಕೆ ಸ್ವಾಗತವು ಸುಸ್ವಾಗತವು॥ಪ॥ "ಸು" ಎಂಬ ಕನ್ನಡ ಅಕ್ಷರವು ಸುಮಧುರವಾಗಿ ಕರೆಯುವುದು। ಎಲ್ಲರೂ ಬನ್ನಿ ಸಂತಸದಿ ನಮ್ಮಯ ಇಂದಿನ ಸಂಭ್ರಮಕೆ॥ "ಸ್ವಾ" ಎಂಬ ಕನ್ನಡ ಅಕ್ಷರವು ಸ್ವಾಗತಿಸುವುದು ಸರ್ವರನ್ನು। ಸಭಿಕರೆ ಬನ್ನಿರಿ ಸಂತಸದಿ ನಮ್ಮಯ ಇಂದಿನ ಸಂಭ್ರಮಕೆ॥ "ಗ" ಎಂಬ ಕನ್ನಡ ಅಕ್ಷರವು ಘಮಘಮ ಪರಿಮಳ ಬೀರುವುದು। ಸುಮಗಳ ದೇವಗೆ ಅರ್ಪಿಸುತ ಕೋರುವೆವು ಪ್ರೀತಿಯ ಸ್ವಾಗತ॥ "ತ" ಎಂಬ ಕನ್ನಡ ಅಕ್ಷರವು ತಾಯಿಯ ಪ್ರೀತಿಯ ಸಾರುವುದು। ದೇವರ ನಾಮದಲಿ ಕೋರುವೆವು ಪ್ರೀತಿಯ ಸ್ವಾಗತ। ಇಂದಿನ ದಿನವೇ ಶುಭದಿನವು ಹಾಡುತಲಿರುವುದು ತನುಮನವು। ಬಂದಿಹರೆಲ್ಲಾ ಸಭಿಕರಿಗೆಲ್ಲಾ ಸ್ವಾಗತವು ಸುಸ್ವಾಗತವು॥

ಸ್ವಾಗತವು ಸ್ವಾಗತವೂ ಎಲ್ಲರಿಗೂ **ರಾಗ:ಹಂಸಧ್ವನಿ**

ಸ್ವಾಗತವು ಸ್ವಾಗತವೂ। ಎಲ್ಲರಿಗೂ ಸ್ವಾಗತವೂ॥ಪ॥ ಆನಂದ ತುಂಬಿ ನಂದ ಗೋಕುಲ। ಅಂದ ಚೆಂದ ಮಕ್ಕಳ ದೇಗುಲಕ್ಕೆ। ಸ್ವಾಗತವೂ ಸ್ವಾಗತವೂ॥1॥ ಸ್ನೇಹದಿಂದ ಹರ್ಷ ತೋರುವ ಒಳ್ಳೆ ಕಲಿಕೆ ಪಡೆಯುವಲ್ಲಿಗೆ। ಸ್ವಾಗತವೂ ಸ್ವಾಗತವೂ॥2॥ ಎಲ್ಲರೂ ಬನ್ನಿರಿ ಕಲಿಯಲು ಸುಗುಣವ। ಉತ್ತಮ ಜೀವನದ ದಾರಿ ತೋರುವ। ಶ್ರೀ ಆಲಯಕೆ ಸ್ವಾಗತವೂ ಸ್ವಾಗತವೂ॥3॥